# ಪ್ರ ದ ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ
## ಸಿ ಸಿ ನಂಃ 1202/2024

ಚಾಸಾ।
ಪ್ರಾಸಾ।

ಸಾಕ್ಷಿಯ ಹೆಸರು : ಮಂಜುನಾಥ
ತಂದೆ / ಗಂಡನ ಹೆಸರು : ಸಣ್ಣತಮ್ಮೆಗೌಡ
ವಯಸ್ಸು : 48
ಉದ್ಯೋಗ : ವ್ಯವಸಾಯ
ವಾಸ ಸ್ಥಳ : ಹೊನ್ನಾಪುರ

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 06.03.2026**
**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ಚಾಸಾ 2 ರಿಂದ 6 ರವರು ನನಗೆ ಗೊತ್ತು . ಚಾಸಾ 13 ರಿಂದ 16 ರವರು ನನಗೆ ಗೊತ್ತು . ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು. ಮೃತ ರಘುನಾಥ ನನ್ನ ತಮ್ಮ . ನಾವು ಇಬ್ಬರು ಮಕ್ಕಳು. ದಿಃ 25.05.2024 ರಂದು ನಾನು ಮನೆಯ ಬಳಿ ಇದ್ದೆ. ರಾತ್ರಿ ಸುಮಾರು 11.45 ಗಂಟೆಗೆ ಚಾಸಾ 2 ರವರು ನನಗೆ ದೂರವಾಣಿ ಕರೆ ಮಾಡಿ ಅವರಿಗೂ ಮತ್ತು ಮೃತ ರಘುನಾಥ ರವರಿಗೂ ಅಪಘಾತವಾಗಿರುತ್ತದೆ, ಸದರಿ ಅಪಘಾತದಲ್ಲಿ ಅವರಿಗೆ ಕೈ ಕಾಲುಗಳಿಗೆ ಏಟು ಆಗಿರುತ್ತದೆ. ಮತ್ತು ಮೃತ ರಘುನಾಥ ರವರಿಗೆ ಕಾಲು ಕಟ್ಟಾಗಿರುತ್ತದೆ ಎಂದು ದೂರುವಾಣಿಯಲ್ಲಿ ತಿಳಿಸಿದರು. ಆಗ ನಾನು , ಚಾಸಾ 3 ಮತ್ತು 4 ರವರು ಗಾಡಿಯಲ್ಲಿ ಸದರಿ ಅಪಘಾತದ ಸ್ಥಳಕ್ಕೆ ಹೋದೆವು. ಹೋಗಿ ಯಾವುದೆ ಒಂದು ಗೂಡ್ಸ ವಾಹನದಲ್ಲಿ ಚಾಸಾ 2 ಮತ್ತು ಮೃತ ರಘುನಾಥ ರವರನ್ನು ಕುಶಾಲನಗರ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು . ಆಗ ರಘುನಾಥರವರು ಆಸ್ಪತ್ರೆಗೆ ಬರುವ ಅಷ್ಟರಲ್ಲಿ ಮೃತ ಪಟ್ಟಿದ್ದು ಚಸಾ 2 ರವರನ್ನು ಹೆಚ್ಚಿ ನ ಚಿಕಿತ್ಸೆಗಾಗಿ ಮೈಸೂರಿಗೆ ಕರೆದುಕೊಂಡು ಹೋದರು.

ನಂತರ ನಾನು ಪೋಲಿಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇನೆ. ಸದರಿ ದೂರನ್ನು ದಿಃ 26.05.2024 ರಂದು ಬೆಳಗಿನ ಜಾವ 4.00 ಗಂಟೆಯಲ್ಲಿ ನೀಡಿರುತ್ತೇನೆ. ನಂತರ ಅದೆ ದಿನ 10.30 ಗಂಟೆಗೆ ನನ್ನನ್ನು ಮಹಜರಗೆ ಕರೆದುಕೊಂಡು ಹೋಗುತ್ತಾರೆ. ಅಪಘಾತದ ಸ್ಥಳವನ್ನು ನಾನು , ಚಾಸಾ 13 ಮತ್ತು 14 ರವರು ತೋರಿಸಿಕೊಟ್ಟಿರುತ್ತೇವೆ. ಸದರಿ ಸ್ಥಳದಲ್ಲಿ ಪೋಲಿಸರು ಕಾರಿನ ಹೆಡ್ ಲೈಟ್ ಮತು್ತ ಮೀರರ್ ಮತ್ತು ಮುಂದಿನ ಬಾಗ ಬಂಪರ್ ನ್ನು ಅಮಾನತ್ತು ಪಡಿಸಿಕೊಳ್ಳುತ್ತಾರೆ. ಅದೆ ವೇಳೆಯಲ್ಲಿ ಸ್ಥಳ ನಕಾಶೆಯನ್ನು ತಯಾರುಸುತ್ತಾರೆ. ಸದರಿ ಮಹಜರನ್ನು ಸುಮಾರು 10.30-11.30 ಗಂಟೆಯವರೆಗೆ ಜರುಗಿಸಿರುತ್ತಾರೆ . ನಂತರ ನಾನು ಮಹರಜಗೆ ಓದಿ ಸಹಿ ಹಾಕಿರುತ್ತೇನೆ. ನಂತರ ಎಕ್ಸಲ್ 100 ಬೈಕ ಸಂಖ್ಯೆ ಕೆ ಎ 45 ಇ ಸಿ 3780 ವಾಹನವನ್ನು ಠಾಣೆಗೆ ತೆಗೆದುಕೊಂಡು ಹೋಗಿ ಠಾಣೆಯಲ್ಲಿ ಸುಮಾರು 12.00-12.30 ಗಂಟೆಯವರೆಗೆ ಮಹಜರ ಮಾಡಿ 2 ಫೋಟೋಗಳನ್ನು ತೆಗೆದುಕೊಳ್ಳುತ್ತಾರೆ. ನಂತರ ಅದನ್ನು ಓದಿ ಹೇಳಿ ನನ್ನ ಸಹಿಯನ್ನು ಪಡೆದುಕೊಳ್ಳುತ್ತಾರೆ.

ಸಾಕ್ಷಿಗೆ ದೂರು ಮತ್ತು ಎರಡು ಪಂಚನಾಮೆಗಳನ್ನು ತೋರಿಸಲಾಗಿ ಸಾಕ್ಷಿಯು ದೂರು ಮತ್ತು ಪಂಚನಾಮೆಗಳಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1ಎ ಎಂದು, ಎರಡು ಪಂಚನಾಮೆಗಳನ್ನು ನಿಪಿ 2 ಮತ್ತು 3 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ 2ಎ ಮತ್ತು 3 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ 2 ಫೋಟೋಗಳನ್ನು ತೋರಿಸಲಾಗಿ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ 4 ಮತ್ತು 5 ಎಂದು , ಮತ್ತು ಅದಕ್ಕೆ ಹೊಂದಿಕೊಂಡಂತೆ ಸಿಡಿಯನ್ನು ನಿಪಿ 6 ಎಂದು ಗುರತಿಸಲಾಯಿತು.

(ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ. ವಾದ ವಿವಾದ ಆಲಿಸಿದ್ದೇನೆ. ದಾಖಲೆಗಳನ್ನು ಪರಿಶೀಲಿಸಿದೆ. ಅನುಮತಿಸಿದೆ.)

**ಪಾಟಿ ಸವಾಲುಃ ಮಾನ್ಯ ಎ ಪಿ ಪಿ ಯವರಿಂದ**

ಸ್ಥಳ ಪಂಚನಾಮೆಯ ವೇಳೆಯಲ್ಲಿ ಪೋಲಿಸರು 6 ಛಾಯಚಿತ್ರಗಳನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಸದರಿ ಫೋಟೊಗಳನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಒಪ್ಪಿದ ಮೇರೆಗೆ ನಿಪಿ 7 ರಿಂದ 12 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಬಿ ಕೆ ಆರ್ ವಕೀಲರಿಂದ**

ಕೂಡಿಗೆ ಚರ್ಚ್ ಎದುರುಗಡೆ ಅಪಘಾತವಾಗಿರುತ್ತದೆ ಎಂದು ಚಾಸಾ 2 ರವರು ತಿಳಿಸಿದರು. ನನಗೆ ಚಾಸಾ 2 ರವರು ರಾತ್ರಿ 11.45 ಕ್ಕೆ ಕರೆ ಮಾಡಿ ಅಪಘಾತದ ಬಗ್ಗೆ ತಿಳಿಸಿದ್ದು ಯಾವ ಸಮಯಕ್ಕೆ ಅಪಘಾತವಾಯಿತು ಎಂದು ಅವರು ತಿಳಿಸಿರುವುದಿಲ್ಲ. ನಮ್ಮ ಮನೆಯಿಂದ ಅಪಘಾತದ ಸದಳಕ್ಕೆ ಬರಲು 45 ನಿಮಿಷ ಬೇಕು ಎಂದರೆ ಸಾಕ್ಷಿಯು 10-15 ನಿಮಿಷ ಸಾಕು ಎಂದು ನುಡಿದರು. ನಾನು ಕೃತ್ಯ ನಡೆದ ಸ್ಥಳಕ್ಕೆ ಬಂದ ಮೇಲೆ ಗಾಯಗೊಂಡ ವ್ಯಕ್ತಿಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಸ್ಥಳಕ್ಕೆ ಹೋದಾಗ ರಘುನಾಥರವರಿಗೆ ಪ್ರಜ್ಞೆ ಇರಲಿಲ್ಲ. ಚಾಸಾ 2 ರವರಿಗೆ ಪ್ರಜ್ಞೆ ಇತ್ತು . ಆ ಸಮಯದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಬೇರೆ ಯಾರು ಇರಲಿಲ್ಲ. ನಾನು ಗೂಡ್ಸ ವಾಹನದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದೆ ಎಂದು ತಿಳಿಸಿದ್ದು ಅದರ ಸಂಖ್ಯೆ ನನಗೆ ಗೊತ್ತಿಲ್ಲ. ಚಾಸಾ 16 ರವರು ನನಗೆ ಗೂಡ್ಸ ವಾಹನದ ಸಂಖ್ಯೆಯನ್ನು ತಿಳಿಸಿರುವುದಿಲ್ಲ. ಆಸ್ಪತ್ರೆಗೇ ಕರೆದುಕೊಂಡು

ಹೋಗ ಬೇಕಾದರೆ ಚಾಸಾ 16 ರವರು ಇದ್ದರು. ನಾನು ಸ್ಥಳಕ್ಕೆ ಹೋದಾಗ ಚಾಸಾ 3 ಮತ್ತು 4 ಮತ್ತು 16 ರವರು ಇದ್ದರು. ಆ ಸಮಯದಲ್ಲಿ ಬೇರೆ ಯಾರು ಕೃತ್ಯ ನಡೆದ ಸ್ಥಳದಲ್ಲಿ ಇರಲಿಲ್ಲ. ನಾನು ಪೋಲಿಸರಿಗೆ ಕೂಡಿಗೆ ಬಳಿ ಚರ್ಚ್ ಎದುರುಗಡೆ ಅಪಘಾತವಾಗಿರುವ ವಿಚಾರ ತಿಳಿಸಿರುತ್ತೇನೆ. ನಿಪಿ 7 ರಿಂದ 12 ರಲ್ಲಿ ಚರ್ಚ್ ಕಾಣಿಸುತ್ತಿಲ್ಲ . ನಿಪಿ 7 ರಿಂದ 12 ರಲ್ಲಿ ಅಪಘಾತವಾಗಿರುವ ಗುರುತು ಇಲ್ಲ ಎಂದರೆ ಸರಿ .

ಕೃತ್ಯ ನಡೆದ ಸ್ಥಳದಲ್ಲಿ ಯಾವುದೆ ಮಹಜರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮಹಜರಗೆ ಕೃತ್ಯ ನಡೆದ ಸ್ಥಳದಲ್ಲಿ ಸಹಿ ಹಾಕಿರುತ್ತೇನೆ. ನಾನು ಮಹಜರಗೆ ಮತ್ತು ನಕ್ಷೆಗೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ . ಹೆಡ್ ಲೈಟ್ , ಬಂಪರ್ ಮತ್ತು ಮೀರರ್ ನ್ನು ನಾನೆ ತೆಗೆದುಕೊಂಡು ಹೋಗಿ ಪೋಲಿಸ್ ಠಾಣೆಗೆ ಹೋಗಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಮ್ಮನಿಗೆ ಮದ್ಯಾಪಾನ ಮಾಡುವ ಅಬ್ಯಾಸ ಇತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಮ್ಮನಿಗೆ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ಸರಿ . ಚರ್ಚ್ ಎದರುರುಗಡೆ ಯಾವುದೆ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ದಿನ ರಪಘುನಾಥ ರವರು ವಾಹನವನ್ನು ಚಾಲನ ಮಾಡುತ್ತಿದ್ದರು. ಕೃತ್ಯ ನಡೆದ ಸ್ಥಳದ ಸುತ್ತಮುತ್ತ ಅಂಗಡಿ ಮನೆಗಳು ಇರುತ್ತವೆ ಎಂದರೆ ಸರಿ . ಮಹಜರ ವೇಳೆಯಲ್ಲಿ ಅಕ್ಕ ಪಕ್ಕದ ಅಂಗಡಿಗಳು ತೆರೆದಿತ್ತಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದರು. ಪೋಲಿಸರು ನನ್ನ ಸಮಕ್ಷಮ ಅಕ್ಕ ಪಕ್ಕದವರನ್ನು ಕರೆಸಲು ಪ್ರಯತ್ನಿಸಿರುವುದಿಲ್ಲ. ನನ್ನ ಸಮಕ್ಷಮ ಪೋಲಿಸರು ಅಕ್ಕ ಪಕ್ಕದವರನ್ನು ವಿಚಾರಣೆ ಮಾಡಿರುವುದಿಲ್ಲ.

ನಾನು ತಿಳಿಸುತ್ತಿರುವ ಕೃತ್ಯ ನಡೆದ ಸ್ಥಳ ಕೂಡಿಗೆ ಸರ್ಕಲ್ ನಿಂದ 10 ಮೀಟರ್ ದೂರದಲ್ಲಿರುತ್ತದೆ ಎಂದರೆ ಸಾಕ್ಷಿಯು ಅದನ್ನು ನಾನು ನೋಡಿರುವುದಿಲ್ಲ ಎಂದು ನುಡಿದರು. ನಾನು ತಿಳಿಸುತ್ತಿರುವ ಕೃತ್ಯ ನಡೆದ ಸ ್ಥಳ ಕೂಡಿಗೆ ಸರ್ಕಲ್ ನಿಂದ ಕಾಣಿಸುತ್ತದೆ ಎಂದರೆ ಸರಿ . ನಾನು ತಿಳಿಸುತ್ತಿರುವ ಕೃತ್ಯ ನಡೆದ ಸ್ಥಳ ಸಾರ್ಜನಿಕರು ಓಡಾಡುವ ಸ್ಥಳ ಎಂದರೆ ನನಗೆ ಗೊತ್ತಿಲ್ಲ. ಕೂಡಿಗೆ ಸರ್ಕಲ್ ನ ಬಳಿ ಸರಕಾರಿ ಆಸ್ಪತ್ರೆ , ಕ್ಲಿನಿಕ್ ಇರುತ್ತದೆ ಎಂದರೆ ಸರಿ . ಕೂಡಿಗೆ ಸರ್ಕಲ್ ಬಳಿ ಇದ್ದ ಸರಕಾರಿ ಆಸ್ಪತ್ರೆಗೆ ಗಾಯಾಳುಗಳನ್ನು ಕರೆದುಕೊಂಡು ಹೋಗಲು ನನಗೆ ಯಾವುದೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಕರೆದುಕೊಂಡು ಹೋಗಿರುವುದಿಲ್ಲ ಎಂದು ನುಡಿದರು. ನಾನು ತಿಳಿಸುತ್ತಿರುವ ಕೃತ್ಯ ನಡೆದ ಸ್ಥಳದ ಬಳಿ ಆಟೋ ಸ್ಟ್ಯಾಂಡ್ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕೂಡಿಗೆ ಸರ್ಕಲ್ ಬಿಟ್ಟು ಕೃತ್ಯ ನಡೆದ ಸ್ಥಳಕ್ಕೆ ಹೋಗುವಾಗ ಒಂದು ದೊಡ್ಡ ಹಮ್ಸ ಇರುತ್ತದೆ ಎಂದರೆ ಸರಿ . ರಘುನಾಥ ರವರು ಹಮ್ಸ ಪಕ್ಕದಲ್ಲಿ ಬಿದ್ದಿದ್ದರು ಎಂದರೆ ಸರಿಯಲ್ಲ.

ಬೈಕ್ ಉಜ್ಜಿದ ಮಾರ್ಕ್ ಅಪಘಾತದ ಸ್ಥಳದಲ್ಲಿ ಇದ್ದು ಅದನ್ನು ಮಹಜರನಲ್ಲಿ ಬರೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಮ್ಮ ರಘುನಾಥರವರಿಗೆ ವಾಹನ ಚಾಲನೇ ಮಾಡದೆ ಬಾರದೆ ಅವರೇ ಹಮ್ಸ ಹಾರಿ ಬಿದ್ದಿರುತ್ತಾರೆ ಎಂದರೆ ಸರಿಯಲ್ಲ. ಅತೀ ಹೆಚ್ಚು ಮದ್ಯಾಪಾನ ಮಾಡಿದ್ದರಿಂದ ರಘುನಾಥರವರ ನಿರ್ಲಕ್ಷತೆ ಅಪಘಾತವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ 2 ರವರು ನನಗೆ ಅಪಘಾತನ ಬಗ್ಗೆ ತಿಳಿಸಿರುವುದಿಲ್ಲ ನಾನೆ ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಹೇಗೆ ಆಯಿತು ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ . ನಾನು ಕೃತ್ಯ ನಡೆದ ಸ್ಥಳದಕ್ಕೆ ಹೋದಾಗ ಬೈಕ್ ಅಲ್ಲೆ ಇತ್ತು . ನಿಪಿ 7 ರಿಂದ 12 ರಲ್ಲಿ ಬೈಕ್ ಕಾಣಿಸುತ್ತಿಲ್ಲ . ಬೈಕನ್ನು ಅಪಘಾತ ಸ್ಥಳದಿಂದ ಪೋಲಿಸ್ ಠಾಣೆಗೆ ನಾವೆ

ತೆಗೆದುಕೊಂಡು ಹೋಗಿರುತ್ತೇವೆ. ಕೃತ್ಯ ನಡೆದ ಸ್ಥಳದಲ್ಲಿ ಪೋಲಿಸರು ಯಾವುದೆ ಮಹಜರನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಿಮೆ ಪರಿಹಾರ ಪಡೆಯಲು ನಾನೆ ಫೋಟೋಗಳನ್ನು ಸೃಷ್ಟಿಸಿ ಠಾಣೆಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಪರಿಹಾರವನ್ನು ಪಡೆಯಲು ಅಪಘಾತವಾಗಿದೆ ಎಂದು ಸೃಷ್ಟಿಸಿನ ದುರಾನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೆ ಮಹಜರ ಕ್ರಮ ನಿಪಿ 2 ಮತ್ತು 3 ರಂತೆ ಜರುಗಿಸಿರುವುದಿಲ್ಲ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ.